Received on 29/6/202

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಅಉಐಡಿ-ಸೃಜನೆ/146/2020-21 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು, ದಿನಾಂಕ:29.06.2021.

## ಸುತ್ತೋಲೆ

ವಿಷಯ: 2020-21ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಪ್ರಾಂಶುಪಾಲರ ಹಂತದಲ್ಲಿ ಹೊಸದಾಗಿ ನೇಮಿಸಿಕೊಂಡಿರುವ ನೂತನ ಅತಿಥಿ ಉಪನ್ಯಾಸಕರ ಐ.ಡಿ. ಸೃಜನೆ ಬಗ್ಗೆ ಹಾಗೂ ಅತಿಥಿ ಉಪನ್ಯಾಸಕರ ವಿವರಗಳನ್ನು ಇ.ಐ.ಎಂ.ಎಸ್. ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ದಿನಾಂಕ:07-05-2021 ರ ಸುತ್ತೋಲೆ ಸಂಖ್ಯೆ: ಕಾಶಿಇ/ನೇವಿ-1/ಅಉಆ/13/2020-21.

2) ವಿವಿಧ ಕಾಲೇಜಗುಳ ಪ್ರಾಂಶುಪಾಲರು ಸಲ್ಲಿಸಿರುವ ಮನವಿಗಳು.

* * * * * * *

2020-21ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಈ ಹಿಂದೆ ಆಯಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲು, ಉಲ್ಲೇಖ-(1) ರ ಈ ಕಛೇರಿಯ ಸುತ್ತೋಲೆಯಲ್ಲಿ ಈಗಾಗಲೇ ಅನುಮತಿ ನೀಡಲಾಗಿದೆ. ಹೀಗೆ ಆಯ್ಕೆ ಮಾಡಿಕೊಂಡ ನಂತರವೂ, ಉಳಿಕೆಯಾದ ಕಾರ್ಯಭಾರಕ್ಕೆ ಪ್ರಾಂಶುಪಾಲರ ಹಂತದಲ್ಲಿಯೇ ನೇಮಿಸಿಕೊಂಡಿರುವ ನೂತನ ಅತಿಥಿ ಉಪನ್ಯಾಸಕರಿಗೆ ಐ.ಡಿ. ಸೃಜನೆ ಮಾಡಿಕೊಂಡುವಂತೆ ಕೋರಿ ಉಲ್ಲೇಖ-(2)ರ ಮನವಿಗಳಲ್ಲಿ ಕೋರಲಾಗಿದೆ. ಆದರೆ, ಸದರಿ ಐ.ಡಿ. ಸೃಜನೆ ಮಾಡಲು ಕಾಲೇಜುಗಳಿಂದ ಸಲ್ಲಿಸಲಾದ ಪ್ರಸ್ತಾವನೆಗಳಲ್ಲಿ ಅಗತ್ಯ ಮಾಹಿತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಅತಿಥಿ ಉಪನ್ಯಾಸಕರ ಐ.ಡಿ. ಸೃಜನೆ ಮಾಡಲು ಅಗತ್ಯವಿರುವ ಮಾಹಿತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿಯೇ ಭರ್ತಿ ಮಾಡಿ, ಈ ಕಛೇರಿಯ ಇ-ಮೇಲ್ ವಿಳಾಸ: **dce.gf2021@gmail.com** ಗೆ ಕೂಡಲೇ ರವಾನಿಸುವಂತೆ ಸೂಚಿಸಲಾಗಿದೆ. ಹಾಗೂ ಇನ್ನು ಮುಂದೆ ಅತಿಥಿ ಉಪನ್ಯಾಸಕರ ಐ.ಡಿ. ಸೃಜನೆಗೆ ಸಂಬಂಧಿಸಿದಂತೆ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿಯೇ ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡಿ ಮೇಲ್ಕಂಡ ಇ-ಮೇಲ್ ವಿಳಾಸಕ್ಕೆ ಸಲ್ಲಿಸುವಂತೆ, ಮತ್ತು ನೇಮಿಸಿಕೊಂಡ ಅತಿಥಿ ಉಪನ್ಯಾಸಕರ ವಿವರಗಳನ್ನು ಕಡ್ಡಾಯವಾಗಿ ಇ.ಐ.ಎಂ.ಎಸ್. ನಲ್ಲಿ ಅಪ್‌ಲೋಡ್ ಮಾಡಲು ಸಹ ಸೂಚಿಸಲಾಗಿದೆ.

29/6/21

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ,**

ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು:**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
3. ಕಛೇರಿ ಪ್ರತಿ.

E:\Bhaskar\2020-21 Guest Faculty Circular.docx

# GUEST FACULTY Details For ID Creation

| | |
|---|---|
| Select the 10th Board of Study* | |
| Register No./Roll No. as per SSLC/ 10th Class Marks Card* | |
| Date of Birth* | |
| Name of the Applicant* | |
| Father's Name* | |
| Gender* | |
| Category* | |
| Physically Handicapped?* | |
| Address* | |
| Mobile Number* | |
| Email ID* | |
| Qualifying PG Degree* | |
| Subject of Study at PG* | |
| Specialization at PG | |
| Year of Passing Qualifying Degree* | |
| **Percentage of marks scored (Aggregate of all semesters/years in UG and PG Course)*** | |
| SSLC/10th Class: | |
| UG: | |
| PG: | |
| **Additional Qualifiaction** | |
| M Phil : | |
| PhD : | |
| NET/SLET : | |
| Total teaching experience in Government First Grade Colleges* | |